# ಕರ್ನಾಟಕ ವಿದ್ಯುತ್ ಪ್ರಸರಣ ನಿಗಮ ನಿಯಮಿತ

## ನೂತನ ವ್ಯಾಖ್ಯಾನಿತ ಅಂಶದಾಯಿ ಕೊಡುಗೆ ಪಿಂಚಣಿ ಯೋಜನೆ ಘಟಕ.

ಕವಿಪ್ರನಿನಿ/ಬಿ. B93/ 35989/ 2016-17 ೮೪೨-೧

ನಿಗಮ ಕಾರ್ಯಾಲಯ, ಕಾವೇರಿ ಭವನ,
ಬೆಂಗಳೂರ. ದಿನಾಂಕ:೨೭-09-2016

1. ವ್ಯವಸ್ಥಾಪಕ ನಿರ್ದೇಶಕರು,
   ಎಲ್ಲಾ ವಿದ್ಯುತ್ ಸರಬರಾಜು ಕಂಪನಿಗಳು.
2. ಎಲ್ಲಾ ಆರ್ಥಿಕ ಸಲಹೆಗಾರರು,
   ಕವಿಪ್ರನಿನಿ ಮತ್ತು ಎಲ್ಲಾ ವಿಸಕಂಗಳು,

ಮಾನ್ಯರೆ,

ವಿಷಯ ನೂತನ ವ್ಯಾಖ್ಯಾನಿತ ಅಂಶದಾಯಿ ಕೊಡುಗೆ ಪಿಂಚಣಿ ಯೋಜನೆಯಡಿ ಕವಿಪ್ರನಿನಿ / ವಿಸಕಂಗಳ ನೌಕರರ ಪಿಂಚಣಿ ವಂತಿಕೆಗೆ ಸಂಬಂಧಿಸಿದ ಅನುಬಂಧ-4 ರ ವಿವರಗಳನ್ನು ಜುಲೈ 2016 ರ ಮಾಹೆಯಿಂದ ಆರಂಭಿಸಿ ಮುಂದಿನ ಅವಧಿಗೆ ಲೆಕ್ಕ ಘಟಕಗಳು ನೇರವಾಗಿ ತಂತ್ರಾಂಶದಲ್ಲಿ ದಾಖಲಿಸುವ ಬಗ್ಗೆ.

ಉಲ್ಲೇಖ 1. ನಿಗಮದ ಆದೇಶದ ಸಂಖ್ಯೆ ಕವಿಪ್ರನಿನಿ / ಬಿ.93/35978/2014-15 ದಿನಾಂಕ 04-05-2015
2. .ಈ ಕಛೇರಿ ಪತ್ರದ ಸಂಖ್ಯೆ ಕವಿಪ್ರನಿನಿ/ಬಿ. B93/ 35989/ 2016-17 ದಿನಾಂಕ: 31-08-2016

*****

೧. ಉಲ್ಲೇಖ 1 ರಲ್ಲಿರುವ ನಿಗಮದ ಆದೇಶದ ಪ್ರಕಾರ ನೂತನ ವ್ಯಾಖ್ಯಾನಿತ ಅಂಶದಾಯಿ ಕೊಡುಗೆ ಪಿಂಚಣಿ ಯೋಜನೆಯ ಸಂಪೂರ್ಣ ನಿರ್ವಹಣೆಯನ್ನು LIC-P&GS Unit, ಬೆಂಗಳೂರು ರವರಿಗೆ ವಹಿಸಲಾಗಿರುತ್ತದೆ.

೨. ಉಲ್ಲೇಖ 2 ರಲ್ಲಿರುವ ಪತ್ರದಲ್ಲಿ, ಕವಿಪ್ರನಿನಿಯ ಐಟಿ – ಎಂ ಐ ಎಸ್ ಘಟಕವು ಆನ್ ಲೈನ್ ತಂತ್ರಾಂಶವನ್ನು ಅಭಿವೃದ್ಧಿ ಪಡಿಸಿದ್ದು ಅದನ್ನು ಕವಿಪ್ರನಿನಿಯ ಇ-ಪ್ರಸರಣ ವೆಬ್ ಸೈಟ್‌ನಲ್ಲಿ ಪ್ರಕಟಿಸಲಿದೆ ಎಂದೂ ಮತ್ತು ಸದರಿ ತಂತ್ರಾಂಶವನ್ನು ಉಪಯೋಗಿಸಲು ಅನುಕೂಲವಾಗುವಂತೆ ಬಳಕೆದಾರರ ಕೈಪಿಡಿಯನ್ನು(User Manual) ಸಹ ವೆಬ್ ಸೈಟ್‌ನಲ್ಲಿ ಪ್ರಕಟಿಸಲಾಗುವುದು ಎಂದು ತಿಳಿಸಲಾಗಿತ್ತು.

೩. ಸದರಿ **ತಂತ್ರಾಂಶವನ್ನು** ಮತ್ತು **ಬಳಕೆದಾರರ ಕೈಪಿಡಿಯನ್ನು** (User Manual) ದಿನಾಂಕ 06-09-2016 ರಂದು ಕವಿಪ್ರನಿನಿಯ ಇ-ಪ್ರಸರಣ ವೆಬ್ ಸೈಟ್‌ನಲ್ಲಿ (kptcl.com ➡ eprasarana ➡ Administrative ➡ KPTCL & ESCOMs New Defined Contributory Pension Scheme Cell ➡ NDCPS software ) ಪ್ರಕಟಿಸಲಾಗಿರುತ್ತದೆ. ಸದರಿ ತಂತ್ರಾಂಶದ ಪ್ರಮುಖ ರೂಪರೇಷೆಗಳು ಈ ಕೆಳಕಂಡಂತಿದೆ.

ಅ. ಪ್ರತಿ ಲೆಕ್ಕ ಘಟಕದ ಲೆಕ್ಕಾಧಿಕಾರಿ, ಸಹಾಯಕ ಲೆಕ್ಕಾಧಿಕಾರಿ ಮತ್ತು ವಿಷಯ ನಿರ್ವಾಹಕರಿಗೆ ತಂತ್ರಾಂಶವನ್ನು ಉಪಯೋಗಿಸಲು User-Id & Password ಕಲ್ಪಿಸಲಾಗಿದೆ. ಇದರಿಂದ ವಿಷಯ ನಿರ್ವಾಹಕರು ಮಾಡಿದ ದಾಖಲಾತಿಗಳನ್ನು ಸಹಾಯಕ ಲೆಕ್ಕಾಧಿಕಾರಿ ಮತ್ತು ಲೆಕ್ಕಾಧಿಕಾರಿಯವರು ಪರಿಶೀಲಿಸಿ ನಿಖರತೆಯನ್ನು ಖಚಿತ ಪಡಿಸಿಕೊಳ್ಳಬಹುದು.

ಆ. ಮೊದಲನೇ ಸಲ log-in ಆದ ನಂತರ Password ಅನ್ನು ಬದಲಾಯಿಸುವುದು ಕಡ್ಡಾಯ.

ಇ. ತಂತ್ರಾಂಶಕ್ಕೆ log-in ಆದ ನಂತರ ಗಣಕ ಯಂತ್ರದ ಪರದೆಯ ಮೇಲೆ Data Entry, Employee Transfer, Reports ಮತ್ತು change pass word ಎನ್ನುವ ಶೀರ್ಷಿಕೆಗಳು ಕಾಣುತ್ತವೆ.

ಈ. ಮೊದಲನೆಯ ಶೀರ್ಷಿಕೆ Data Entry ಶೀರ್ಷಿಕೆಯಲ್ಲಿ 5 ಉಪಶೀರ್ಷಿಕೆಗಳನ್ನು ಕಾಣಬಹುದು. ಅವುಗಳು

1. Assign Case worker & Sl. No.

2 Monthly Contribution,

3.Edit Monthly Contribution,

4. Arrear Contribution &

5.Supplimentary Contribution.

ಈ ಶೀರ್ಷಿಕೆಗಳನ್ನು ಉಪಯೋಗಿಸಿಕೊಂಡು ಪಿಂಚಣಿ ವಂತಿಗೆಯ ವಿವರಗಳನ್ನು ತಂತ್ರಾಂಶದಲ್ಲಿ ದಾಖಲಿಸಬಹುದಾಗಿರುತ್ತದೆ.

ಉ. ಜುಲೈ 2016 ರ ಮೊದಲ ತಿಂಗಳ ಪಿಂಚಣಿ ವಂತಿಗೆ ವಿವರಗಳನ್ನು ದಾಖಲಿಸುವ ಮೊದಲು Assign Case worker & Sl. No. ಶೀರ್ಷಿಕೆಯಲ್ಲಿ ಸಿಬ್ಬಂದಿ ವಿಷಯ ನಿರ್ವಾಹಕರು ನಿರ್ವಹಿಸುತ್ತಿರುವ ವೇತನ ರಿಜಿಸ್ಟರ್ (Scale Register) ಕ್ರಮ ಸಂಖ್ಯೆಯನ್ನು ಆಯಾ ನೌಕರ / ಅಧಿಕಾರಿಯ ಹೆಸರಿನ ಮುಂದೆ ದಾಖಲಿಸಿ ಸೇವ್ ಮಾಡಬೇಕು. ತದನಂತರ ನೌಕರ / ಅಧಿಕಾರಿಯ ಹೆಸರು ವೇತನ ರಿಜಿಸ್ಟರ್ (Scale Register) ಕ್ರಮ ಸಂಖ್ಯೆಯಂತೆ ಬರುವುದರಿಂದ ಪಿಂಚಣಿ ವಂತಿಗೆ ದಾಖಲಿಸಲು ಅನುಕೂಲವಾಗುವುದು. ಈ ಪ್ರಕ್ರಿಯೆಯನ್ನು ಪ್ರತಿ ತಿಂಗಳೂ ಮಾಡುವ ಅವಶ್ಯಕತೆ ಇರುವುದಿಲ್ಲ.
ಹಿಂದಿನ ತಿಂಗಳಿನಲ್ಲಿ ದಾಖಲಿಸಲಾದ ಪಿಂಚಣಿ ವಂತಿಗೆ ವಿವರಗಳನ್ನು ಪ್ರಸ್ತುತ ತಿಂಗಳಿಗೆ ಕಾಪಿ ಮಾಡಿಕೊಂಡು ಹಿಂದಿನ ತಿಂಗಳಿಗೆ ಹೋಲಿಸಿದರೆ ಬದಲಾವಣೆಯಾದ ಪಿಂಚಣಿ ವಂತಿಗೆ ವಿವರಗಳನ್ನು ಮಾತ್ರ ತಂತ್ರಾಂಶದಲ್ಲಿ ದಾಖಲಿಸಿ ಸೇವ್ ಮಾಡಲು ಅವಕಾಶ ಕಲ್ಪಿಸಿರುವುದನ್ನು ಲೆಕ್ಕ ಘಟಕಗಳು ಸಮರ್ಥವಾಗಿ ಉಪಯೋಗಿಸಿಕೊಳ್ಳಬಹುದು.

ಊ. ವೇತನ ಬಾಕಿ ಅಥವಾ ಪೂರಕ ವೇತನ ಪಾವತಿಸಿದಾಗ ಮುರಿದು ಕೊಳ್ಳಲಾಗುವ ಪಿಂಚಣಿ ವಂತಿಗೆಯ ತಿಂಗಳವಾರು ವಿವರಗಳನ್ನು ತಂತ್ರಾಂಶದಲ್ಲಿ ದಾಖಲಿಸಲು ಅವಕಾಶ ಕಲ್ಪಿಸಲಾಗಿರುತ್ತದೆ.

ಋ. Employee Transfer ಶೀರ್ಷಿಕೆಯಡಿಯಲ್ಲಿ ನೂತನ ಪಿಂಚಣಿ ಯೋಜನೆ ವ್ಯಾಪ್ತಿಯ ಅಧಿಕಾರಿ / ನೌಕರರು ವರ್ಗಾವಣೆಗೊಂಡಾಗ Transfer-in & Transfer-out ಆಯ್ಕೆ ಉಪಯೋಗಿಸಿಕೊಂಡು ವರ್ಗಾವಣೆ ವಿವರಗಳನ್ನು ತಂತ್ರಾಂಶದಲ್ಲಿ ದಾಖಲಿಸಲು ಅವಕಾಶ ಕಲ್ಪಿಸಲಾಗಿರುತ್ತದೆ.

ಎ. Reports ಶೀರ್ಷಿಕೆಯಡಿಯಲ್ಲಿ Monthly Contribution & Contribution Abstract ಎನ್ನುವ 2 ಉಪಶೀರ್ಷಿಕೆಗಳನ್ನು ಕಾಣಬಹುದು. ಕಂಪನಿಗಳ ನಿಗಮ ಕಛೇರಿಯವರು Contribution Abstract ಉಪಯೋಗಿಸಿಕೊಂಡು ಕಂಪನಿ ವ್ಯಾಪ್ತಿಯ ಎಲ್ಲಾ ಲೆಕ್ಕಘಟಕವಾರು ಪಿಂಚಣಿ ಮೊತ್ತವನ್ನು ಅವಲೋಕಿಸಬಹುದು. ಇದರಿಂದ ಒಟ್ಟು ಮೊತ್ತಕ್ಕೆ ಕೆಇಎನ್‌ಡಿಸಿಪಿಎಸ್ ಘಟಕಕ್ಕೆ ಒಂದೇ ಮೊತ್ತದ ನಿಧಿ ವರ್ಗಾವಣೆ ಮಾಡಲು ಅನುಕೂಲವಾಗುತ್ತದೆ.

ಏ. ವಿಷಯ ನಿರ್ವಾಹಕರು ಪ್ರತಿ ತಿಂಗಳ ಪಿಂಚಣಿ ವಂತಿಗೆ ವಿವರಗಳನ್ನು ತಂತ್ರಾಂಶದಲ್ಲಿ ದಾಖಲಿಸಿದ ನಂತರ ಸಹಾಯಕ ಲೆಕ್ಕಾಧಿಕಾರಿ / ಲೆಕ್ಕಾಧಿಕಾರಿಯವರು log-in ಆಗಿ ದಾಖಲಾತಿಯನ್ನು ಪರಿಶೀಲಿಸಿ Approve ಮಾಡಬೇಕಿರುತ್ತದೆ.

ಐ. Change Pass Word ಶೀರ್ಷಿಕೆಯಡಿ Pass Word ಅನ್ನು ಬದಲಾಯಿಸಲು ಅವಕಾಶವಿರುತ್ತದೆ.

೪. ಸದರಿ ತಂತ್ರಾಂಶವು ಉಪಯೋಗಿ ಸ್ನೇಹಿಯಾಗಿದ್ದು ಅದರ ಉಪಯೋಗದಲ್ಲಿ ಯಾವುದೇ ತೊಂದರೆಯಾಗದಂತೆ ಅಭಿವೃದ್ಧಿ ಪಡಿಸಲಾಗಿದೆ. ತಂತ್ರಾಂಶವನ್ನು ಉಪಯೋಗಿಸಲು ಪ್ರಾರಂಭಿಸುವ ಮೊದಲು **ಬಳಕೆದಾರರ ಕೈಪಿಡಿಯನ್ನು** (User Manual) ಅನ್ನು ಸಂಬಂಧಿಸಿದ ಎಲ್ಲರೂ ಓದುವುದು ಬಹಳ ಸಹಾಯಕ ಮತ್ತು ಅಗತ್ಯವಾಗಿರುತ್ತದೆ.

೫. ಕವಿಪ್ರನಿನಿ/ ವಿಸಕಂಗಳ ಎಲ್ಲಾ ಲೆಕ್ಕ ಘಟಕಗಳು ಜುಲೈ2016 ರಿಂದ ಪ್ರಾರಂಭಿಸಿ ಮುಂದಿನ ಅವಧಿಗೆ ಪ್ರತಿ ಮಾಹೆಯ ಅಧಿಕಾರಿ / ನೌಕರವಾರು ಪಿಂಚಣಿ ಕೊಡುಗೆ ವಿವರಗಳನ್ನು ಕಡ್ಡಾಯವಾಗಿ ಗರಿಷ್ಠ 3ನೇ ತಾರೀಖಿನೊಳಗಾಗಿ ಆನ್ ಲೈನ್ ತಂತ್ರಾಂಶದಲ್ಲಿ ದಾಖಲಿಸುವುದು. ಮುಂದುವರಿದು ಕಂಪನಿಯ ನಿಗಮ ಕಛೇರಿಯು ಸದರಿ ದಾಖಲಾತಿ ಬಗ್ಗೆ ಪರಿಶೀಲಿಸಿ ಅವಶ್ಯವಿದ್ದರೆ ಸರಿಪಡಿಸಲು ಕ್ರಮ ವಹಿಸಿ ಕ್ರೋಢೀಕೃತ ಪಿಂಚಣಿ ವಂತಿಗೆ ಮೊತ್ತಕ್ಕೆ ಕೆಇಎನ್‌ಡಿಸಿಪಿಎಸ್ ಘಟಕಕ್ಕೆ ನಿಧಿ ವರ್ಗಾವಣೆ ಮಾಡಲು ಕ್ರಮ ತೆಗೆದುಕೊಳ್ಳುವಂತೆ ಕೋರಲಾಗಿದೆ.

೬. .ಸದರಿ ತಂತ್ರಾಂಶವನ್ನು ಉಪಯೋಗಿಸುವಲ್ಲಿ ಸಮಸ್ಯೆಗಳೇನಾದರೂ ಎದುರಾದರೆ ಕೆಇಎನ್‌ಡಿಸಿಪಿಎಸ್ ಘಟಕದ ಲೆಕ್ಕಾಧಿಕಾರಿಯವರಾದ ಶ್ರೀಮತಿ ನಾಗರತ್ನ ರವರನ್ನು ಅವರ ಮೊಬೈಲ್ ಸಂಖ್ಯೆ **94498 75974** ರಲ್ಲಿ ಸಂಪರ್ಕಿಸುವಂತೆ ಕೋರಲಾಗಿದೆ.

ತಮ್ಮ ವಿಶ್ವಾಸಿ

ನಿರ್ದೇಶಕರು
(ಆ ಮತ್ತು ಮಾ.ಸಂ)

ಪ್ರತಿಗಳು:

೧. ವ್ಯವಸ್ಥಾಪಕ ನಿರ್ದೇಶಕರು, ಕವಿಪ್ರನಿನಿ ರವರ ಆಪ್ತ ಕಾರ್ಯದರ್ಶಿ ರವರಿಗೆ. ವ್ಯವಸ್ಥಾಪಕ ನಿರ್ದೇಶಕರ ಗಮನಕ್ಕೆ ತರುವಂತೆ ಕೋರಲಾಗಿದೆ.

೨. ವ್ಯವಸ್ಥಾಪಕ ನಿರ್ದೇಶಕರು, ಪಿ.ಸಿ.ಕೆ.ಎಲ್ ರವರ ಆಪ್ತ ಕಾರ್ಯದರ್ಶಿ ರವರಿಗೆ. ವ್ಯವಸ್ಥಾಪಕ ನಿರ್ದೇಶಕರ ಗಮನಕ್ಕೆ ತರುವಂತೆ ಕೋರಲಾಗಿದೆ.

೩. ನಿರ್ದೇಶಕರು (ಹಣಕಾಸು), ರವರ ಆಪ್ತ ಕಾರ್ಯದರ್ಶಿ ರವರಿಗೆ. ನಿರ್ದೇಶಕರ ಗಮನಕ್ಕೆ ತರುವಂತೆ ಕೋರಲಾಗಿದೆ.

**ಮಾಹಿತಿಗಾಗಿ ಹಾಗೂ ಸೂಕ್ತ ಕ್ರಮಕ್ಕಾಗಿ** www.kptcl.com/eprasarana ವೆಬ್ ಸೈಟ್‌ನಲ್ಲಿ ಪ್ರಕಟಿಸಲಾಗಿದೆ.

೪. ಎಲ್ಲಾ ಮುಖ್ಯ ಇಂಜಿನಿಯರ್ ಕವಿಪ್ರನಿನಿ / ಎಸ್ಕಾಂಗಳು

೫. ಎಲ್ಲಾ ಅಧೀಕ್ಷಕ ಇಂಜನಿಯರ್ / ನಿಯಂತ್ರಣಾಧಿಕಾರಿ ಕವಿಪ್ರನಿನಿ / ಎಸ್ಕಾಂಗಳು

೬. ಎಲ್ಲಾ ಕಾರ್ಯನಿರ್ವಾಹಕ ಇಂಜನಿಯರ್ / ಉಪ ನಿಯಂತ್ರಣಾಧಿಕಾರಿ ಕವಿಪ್ರನಿನಿ / ಎಸ್ಕಾಂಗಳು

೭. ಎಲ್ಲಾ ಲೆಕ್ಕಾಧಿಕಾರಿಗಳು ಕವಿಪ್ರನಿನಿ / ಎಸ್ಕಾಂಗಳು

೮. ಎಲ್ಲಾ ಲೆಕ್ಕಾಧಿಕಾರಿಗಳು (ಆಂತರಿಕ ತನಿಖೆ) ಕವಿಪ್ರನಿನಿ / ಎಸ್ಕಾಂಗಳು